**ಚಾಸಾಃ 13 ಫ್ರಾಸಾಃ 17**

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ: 3/2022

| | |
|---|---|
| ಸಾಕ್ಷಿದಾರರ ಹೆಸರು | :ಅಬ್ದುಲ್ ಗಫೂರ್ |
| ತಂದೆ ಹೆಸರು | :ಅಬ್ದುಲ್ ರಹಿಮಾನ್ |
| ಪ್ರಾಯ | :43 ವರ್ಷ |
| ಕೆಲಸ | :ಚಾಲಕ |
| ವಾಸ ಸ್ಥಳ | :ಬೊಳುಬೈಲು ಮನೆ, ಸುಳ್ಯ ತಾಲೂಕು. |

**ದಿನಾಂಕ 22.04.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿನಾಂಕ 16-08-2011 ರಂದು ಬೆಳಗ್ಗೆ 7.00 ಗಂಟೆಗೆ ಸುಳ್ಯ ಪೋಲೀಸ್ ಠಾಣೆಗೆ ನನ್ನನ್ನು ಕರೆಸಿದ್ದು, ನನ್ನ ಸಮಕ್ಷಮ ಈ ಪ್ರಕರಣದ 2ನೇ ಆರೋಪಿ ಪ್ರೇಮ್ ಸಿಂಗ್ ರವರು  ಒಂದು ಬಿಳಿಯ ಹಾಳೆಯ ಮೇಲೆ ತಮ್ಮ ಕೈ ಬರಹ, ಸಹಿ, ಕನ್ನಡ ಅಕ್ಷರ, ಇಂಗ್ಲೀಷ್ ಅಕ್ಷರ, ಅಂಕೆಗಳು ಮತ್ತು ಹೆಬ್ಬೆಟ್ಟು ಗುರುತುಗಳನ್ನು ಮಾಡಿದ್ದು, ಅವುಗಳನ್ನು ಚಾಸಾ-41 ರವರು ಒಂದು ಲಕೋಟೆಯಲ್ಲಿ ಹಾಕಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿದ್ದರು. ನಾನು ಸದರಿ ಕೆಲಸಕ್ಕೆ ಪಂಚನಾಗಿ ಪೋಲೀಸರಿಗೆ ಸಹಕರಿಸಿದ್ದೆ.  ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಆ ದಿನ 2ನೇ ಆರೋಪಿತನಿಂದ ಕೈ ಬರಹ, ಸಹಿ, ಕನ್ನಡ ಅಕ್ಷರ, ಇಂಗ್ಲೀಷ್ ಅಕ್ಷರ, ಅಂಕೆಗಳು ಮತ್ತು ಹೆಬ್ಬೆಟ್ಟು ಗುರುತುಗಳನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-8 ರಿಂದ 13 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಯಿಂದ 13(ಎ) ಎಂದು ಗುರುತಿಸಲಾಯಿತು. 2ನೇ ಆರೋಪಿ ಪ್ರೇಮ್ ಸಿಂಗ್ ರವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು: 1 ಮತ್ತು 3ನೇ ಆರೋಪಿತರ ಪರವಾಗಿ ಎನ್.ಕೆ. ವಕೀಲರವರಿಂದಃ-**

ನಾನು ಸುಳ್ಯ ಪೋಲೀಸ್ ಠಾಣೆಯಲ್ಲಿ ಗೃಹರಕ್ಷಕನಾಗಿ ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನು. ನಾನು ನಿಪಿ-7 ರಿಂದ ನಿಪಿ-13 ರ ದಾಖಲೆಗಳಿಗೆ ಸಹಿ ಮಾಡಿದಾಗ ಗೃಹರಕ್ಷಕನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸುಳ್ಯ ಪೋಲೀಸ್ ಠಾಣೆಯವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಸುಮಾರು 10-15 ದೋಷಾರೋಪಣಾ ಪತ್ರದಲ್ಲಿ ಸಾಕ್ಷಿದಾರನಾಗಿ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಪೋಲೀಸ್ ವಾಹನಕ್ಕೆ ಚಾಲಕನಾಗಿರುತ್ತೇನೆ. ನನ್ನ ಮತ್ತು ಸುಳ್ಯ ಪೋಲೀಸ್ ಠಾಣೆಯವರ ನಡುವೆ ಒಳ್ಳೆಯ ಬಾಂಧವ್ಯ ಇದೆ ಎಂದರೆ ಕರ್ತವ್ಯಕ್ಕೆ ಹೋಗುವಾಗ ಮಾತ್ರ ಇತ್ತು, ಈಗ ಅಷ್ಟು ಇಲ್ಲ. ನಾನು ಪ್ರಸ್ತುತ ಠಾಣೆಗೆ ಅರ್ಜಿ ಸಲ್ಲಿಸಿ ಗೃಹರಕ್ಷಕನಾಗಿ ಸೇರಿಸಿಕೊಳ್ಳುವಂತೆ ಕೋರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ 2ನೇ ಆರೋಪಿಯು ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-13 ದಾಖಲೆಗಳಲ್ಲಿ 2ನೇ ಆರೋಪಿಯ ಕೈ ಬರಹದ ಮಾದರಿ, ಸಹಿ ಅಥವಾ ಹೆಬ್ಬೆಟ್ಟು ಗುರುತುಗಳು ಇರುವುದಿಲ್ಲ ಹಾಗೂ ಅವುಗಳು ಆತನಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

ಪೋಲೀಸರ ದಾಕ್ಷಿಣ್ಯಕ್ಕೆ ಒಳಪಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಯ ಪೋಲೀಸ್ ಠಾಣೆಯ ಖಾಯಂ ಸಾಕ್ಷಿದಾರ ಎಂದರೆ ಸರಿಯಲ್ಲ.

(2ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.)

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ